ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 27ನೆ ಏಪ್ರೆಲ್ 1904ನೆ ಇಸವಿ.

1904ನೆ ಜುಲೈ ಮಾಹೆ ಗುರ್ರೆ ತಾರೀಖು ಲಾಗಾಯಿತು 1905ನೆ ಇಸವಿ ಜೂನ್ ಮಾಹೆ 30ರ ವರಿಗೆ ಷೆಡ್ಯೂಲ್ A ಯಲ್ಲಿ ನಮೂದು ಮಾಡಿರುವ ಟೋಲ್ ಗೇಟುಗಳಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ಅದರಲ್ಲಿ ಕಂಡ ತಾರೀಖುಗಳಲ್ಲಿ ಡಿಪ್ಯುಟಿ ಕಮಿಷನರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫಿಸರಿಂದ ಬಹಿರಂಗವಾಗಿ ಪುನಹಾ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟುದಾರನು ಷೆಡ್ಯೂಲ್ Bಯಲ್ಲಿ ನಮೂಪುಮಾಡುವ ರೇಟಿನಂತೆಯೇ ಗೇಟುಗಳ ಮುಖಾಂತರ ಹೋಗುವ ಮತ್ತು ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲೀ ಮಂಜೂರ್ಮಾಡುವ ಅಧಿಕಾರವು ಡಿಪ್ಯುಟಿ ಕಮಿಷನರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು ಹತ್ತನೆ ತಾರೀಖಿನ ಮೊಳಗಾಗಿ ಹಿಂದಿನ ಮಾಹೆಯ ಖಿಸ್ತು ವೊಬಲಗನ್ನು ಪಾವತೀ ಮಾಡಬೇಕು. ಹರಾಜು ಆಖೈರು ಆದಕೂಡ್ಲೆ, ಬಾಬನ್ನು ಪಡೆಯತಕ್ಕ ಕಂಟ್ರಾಕ್ಟುದಾರನು ಎರಡು ಮಾಹೆಗಳ ಖಿಸ್ತಿಗೆ ಸಮನಾದ ವೊಬಲಗನ್ನು ಡಿಪಾಜಿಟ್ಟು ಬಗ್ಗೆ ಹಾಜರ್ಮಾಡಬೇಕು. ಪರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಿಟ್ಟಿನಲ್ಲಿರುವ ವೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮೆಗೆ ತೆಗದುಕೊಳ್ಳುತ್ತೆ.

5. ಹರಾಜು ಆಖೈರಾದ ಕೂಡ್ಲೆ ಡಿಪಾಜಿಟ್ಟು ಬಗ್ಗೆ ವೊಬಲಗನ್ನು ಹಾಜರ್ಮಾಡದಿದ್ದರೆ, ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲೆ ಕಂಟ್ರಾಕ್ಟುದಾರನನ್ನು ಗುರಿಪಡಿಸಿ, ಪುನಹಾ ಹರಾಜು ಮಾಡಲ್ಪಡುತ್ತೆ. ಖಿಸ್ತು ವೊಬಲಗನ್ನು ವಾಯಿದೆಯೊಳಗೆ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡುವ ತಾರೀಖಿನವರಿವಿಗೆ ಮಾಹೆಯಾನಾ ರೂಪಾಯಿಗೆ ಒಂದು ಪೈನಂತೆ ಬಡ್ಡಿಕೀರಿಸಿ ಖಿಸ್ತು ವೊಬಲಗು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಡಿಪ್ಯುಟಿ ಕಮಿಷನರವರು ಇಷ್ಟ್ಯಪಟ್ಟಲ್ಲಿ ಉಳಿದ ಕಂಟ್ರಾಕ್ಟನ್ನು ಪುನಹಾ ಹರಾಜುಮಾಡಿ ಲುಕ್ಸಾನಾದಲ್ಲಿ, ಸದರೀ ವೊಬಲಗನ್ನು ಅವಲೆ ಕಂಟ್ರಾಕ್ಟುದಾರನಿಂದ ವಸೂಲ್ಮಾಡುತ್ತೆ. ಎರಡನೇ ಹರಾಜಿನಲ್ಲಿ ನಫೇಬಂದಲ್ಲಿ, ಮೊದಲು ಕಂಟ್ರಾಕ್ಟುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲಾ.

6. ಮೇಲ್ಕಂಡ 5 ಮತ್ತು 4ನೆ ಪ್ಯಾರಾಗಳಲ್ಲಿ ನಮೂದು ಮಾಡಿರುವ ಪರತ್ತುಗಳ ಒಳಪಟ್ಟು ಕಂಟ್ರಾಕ್ಟುದಾರು ಹರಾಜು ವೊಬಲಿಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸನ್ನೂ ಸಹ ಕೇರಿಸಿ, ಪಾವತೀ ಮಾಡಬೇಕು.

7. ಪ್ರತಿ ದಿವಸದಲ್ಲೂ ಉತ್ಪತ್ತಿ ಆಗುವ ವೊಬಲಗನ್ನ ತೋರಿಸುವಂತೆ ಖಿವಾರ್ವಾಕವಾಗಿ ಲೆಖ್ಖವನ್ನು ಕಂಟ್ರಾಕ್ಟುದಾರು ಇಡಬೇಕು. ಡಿಸ್ಟ್ರಿಕ್ಟ ಮತ್ತು ತಾಲ್ಲೂಕು ಉದ್ಯೋಗಸ್ತರು ಅಪೇಕ್ಷಿಸಿದ ಕಾಲದಲ್ಲಿ, ಇನ್ಸ್ಪೆಕ್ಷ್ಯ ಬಗ್ಗೆ ಹಾಜರ್ಮಾಡಬೇಕು.

8. ಮೇಲ್ಕಂಡ 7ನೆ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ಗೇಟುಗಳ ಮುಖಾಂತರ ಹೋಗತಕ್ಕ ಗಾಡಿ ವಗೈರೆ ಟ್ರಾಫಿಕ್‌ಗಳ ಲೆಖ್ಖಗಳನ್ನು ಖಿವಾರ್ವಾಕವಾಗಿ ಇಡಲು, ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಒಬ್ಬ ಮುತ್ಸದ್ದಿಯನ್ನು ಇಡಬೇಕು.

9. ಹಾಲಿಯಿರುವ ಟೋಲ್ ಗೇಟುಗಳನ್ನು ಮತ್ತು ಮನೆಗಳನ್ನು ಒಳ್ಳೇಸ್ಥಿತಿಯಲ್ಲಿ ಇಟ್ಟುಕೊಂಡು ಇರುವದು ಕಂಟ್ರಾಕ್ಟುದಾರನ ಕೆಲಸವಾಗಿರುತ್ತೆ. ಹೊಸ ಗೇಟುಗಳೇ ಆಗಲಿ ಮನೆಗಳೇ ಆಗಲಿ ಅವಶ್ಯಕವಿದ್ದಲ್ಲಿ ಗಾರ್ನಮೆಂಟಿನ ಖರ್ಚಿನಿಂದ ತಯಾರ್ಮಾಡಿಸಲ್ಪಡುತ್ತೆ.

10. ಲೇಟ್ ಚೀಫ್ ಕಮಿಷನರ್ ಸಾಹೇಬರವರ 4—11—1876ನೆ ಮಾರ್ಕಂ 274ನೆ ನಂಬರು ನೋಟಿಫಿಕೇಷ್ಯನ ಹಾಡನೆ ಸಾದರ್ಮಾಡಿರುವ ರೂಲ್ಸುಗಳಿಗೆ ಕಂಟ್ರಾಕ್ಟುದಾರು ಬದ್ಧರಾಗಿರಬೇಕು.

11. ಮೂಳೆ ಅಥವಾ ಗೊಬ್ಬರದಿಂದ ಭರ್ತಿಯಾಗಿರುವ ಗಾಡಿಗಳನ್ನು ಖಾಲಿಗಾಡಿಯಂತೆ ಭಾವಿಸಿ, ಆರೀತಿಯೇ ಸುಂಕ ವಸೂಲ್ಮಾಡಬೇಕು.

ಷೆಡ್ಯೂಲ್. A

ರಸ್ತೆಗಳು.	ಸ್ಪೇಷ್ಯಗಳು.	ಹರಾಜುಗತಕ್ಕ ಸ್ಥಳ.	ಹರಾಜು ತಾರೀಖು.
1. ಬೆಂಗಳೂರು—ಮಂಗಳೂರು ರಸ್ತೆ, ಸಿದ್ಧಾಪುರದ ಬ್ಯಾಂಕು ರಸ್ತೆ	ಪೆರ್ಯಾಪಟ್ಟಣದ ಕೋಟೆಗೆಪಶ್ಚಿಮ ಎರಡು ರಸ್ತೆಗಳು ಸೇರುವ ಸ್ಥಳ.	ಹುಣಸೂರು ತಾಲ್ಲೂಕ್ ಕಛೇರಿ	1904ನೆ ಜೂನ್ ತಾರೀಖು 3ರಲ್ಲಿ.
2. ಹಾಸನ—ಪೆರ್ಯಾಪಟ್ಟಣ—ಕನ್ಯಾನೂರು ರಸ್ತೆ ...	ಪೆರ್ಯಾಪಟ್ಟಣಕ್ಕೂ ಅಂಕನಪಳ್ಳಿಗೂ ಮಧ್ಯೆ		
3. ಮದರಾಸು—ಕನ್ಯಾನೂರು ರಸ್ತೆ ...	ಪಂಜವಳ್ಳಿ		

ಷೆಡ್ಯೂಲ್ B ರೇಟುಗಳು.

ತಪಶೀಲು.	ರೇಟುಗಳು.			ಪರಾ.
	ರೂ.	ಆ.	ಪೈ.	
ಪ್ರಯಾಣಸ್ಥರೊಡನೆ ನಾಲ್ಕು ಚಕ್ರದ ಗಾಡಿ	0	12	0	
ಡಿಟೋ ಇಲ್ಲದೆ ಇರುವ ಡಿಟೋ	0	6	0	
ಡಿಟೋ ಇರುವ ಎರಡು ಚಕ್ರದ ಗಾಡಿ	0	8	0	
ಪ್ರಯಾಣಸ್ಥರೊಡನೆ ಇಲ್ಲದೆ ಇರುವ ಎರಡುಚಕ್ರದ ಗಾಡಿ	0	4	0	
ಗಾಡಿ ಬೋಜಾ ಸಹಿತವಾದದ್ದು	0	4	0	
ಡಿಟೋ ಬೋಜಾ ಇಲ್ಲದ್ದು	0	2	0	
ಆನೆ	1	0	0	
ಒಂಟೆ	0	4	0	
ಕುದುರೆ ಸವಾರನುಳ್ಳದ್ದು	0	1	6	
ಡಿಟೋ ಸವಾರನಿಲ್ಲದ್ದು	0	0	9	
ಕುದುರೆ ಮರಿ, ಸವಾರನುಳ್ಳದ್ದು	0	0	9	
ಡಿಟೋ ಸವಾರನಿಲ್ಲದ್ದು	0	0	6	
ಎತ್ತು ಬೋಜಾ ವುಳ್ಳದ್ದು	0	1	0	
ಡಿಟೋ ಬೋಜಾ ಇಲ್ಲದ್ದು	0	0	6	
ಕತ್ತೆ ಬೋಜಾ ವುಳ್ಳದ್ದು	0	0	6	
ಡಿಟೋ ಬೋಜಾ ಇಲ್ಲದ್ದು	0	0	3	
ಪಲ್ಲಕ್ಕಿ	0	4	0	
ಕುರಿ, ಆಡು ದೂ ಹಂದಿ	0	0	1	

ಸಿ. ಕೃಷ್ಣರಾವ್,
ಘಾರ್ ಪ್ರೆಸಿಡೆಂಟ್ ಡಿಸ್ಟ್ರಿಕ್ಟ್ ಫಂಡ್ ಬೋರ್ಡ್.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ತಾರೀಖು 23ನೆ ಮಾಹೆ ಏಪ್ರೆಲ್ 1904.

ಸ್ರ 1904ನೆ ಇಸವಿ ಜುಲೈ ಮಾಹೆ ತಾರೀಖು 1ರ ಲಾಗಾಯಿತು 1905ನೆ ಇಸವಿ ಜೂನ್ ಮಾಹೆ ತಾರೀಖು 30ರ ವರಿಗೆ ಈ ಕೆಳಗಿನ ಎ. ಷೆಡ್ಯೂಲಿನಲ್ಲಿ ನಮೂದಿಸುವ ಮೈಸೂರು ಸಿಟಿಗೆ ಸೇರಿದ ತಮಾಂ ಟೋಲು ಗೇಟುಗಳ ಮುಖಾಂತ್ರ ಸಿಟಿ ವಳಕ್ಕೆ ಬರುವ ಗಾಡಿಗಳು, ಜಾನವರುಗಳು ವಗ್ಗೆರೆಗಳ ಮೇಲೆ ಬಿ. ಷೆಡ್ಯೂಲಿನಲ್ಲಿ ನಮೂದಾಗುವ ದರದಂತೆ, ಸಿಟಿ ಮ್ಯುನಿಸಿಪಲ್ ರೆಗ್ಯುಲೇ ಷ್ರ 49 ಮತ್ತು 51ನೆ ಸೆಕ್ಷ್ರ್ಗಳಲ್ಲಿ ನಮೂದಿರುವ ಷರತ್ತುಗಳಿಗೆ ವಳಪಡಿಸಿ ಪ್ರತಿಬಂದು ಟೋಲುಗೇಟಿನಲ್ಲಿಯಾಗಲಿ ಅಥವಾ ದರೋಬಸ್ತು ಗೇಟುಗಳಲ್ಲಿದ್ದಾಗಲಿ, ಟೋಲು ವಸೂಲ್ಮಾಡುವ ಬಾಬನ್ನು 1904ನೆ ಇಸವಿ ಮೇ ಮಾಹೆ ತಾರೀಖು 14ನೆ ಮಧ್ಯಾನ್ಹ 1 ಘಂಟೆಯ ಲಾಗಾಯಿತು ರಂಗಾಚಾರ್ಲು ಯವರ ಮವೋರಿಯಲ್ ಹಾಲಿನಲ್ಲಿ ಪೈಸಿಡೆಂಟರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫಿಸರವರಿಂದ, ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟರು ಬಿ. ಷೆಡ್ಯೂಲಿನಲ್ಲಿ ನಮೂದಾಗುವ ರೇಟಿನಂತೆಯೇ ಗೇಟುಗಳ ಮುಖಾಂತರ ಸಿಟಿ ವಳಕ್ಕೆ ಬರುವ ಗಾಡಿ ವಗ್ಗೆರೆಗಳ ಮೇಲೆ ಟೋಲು ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು ಶಿವಾಯಿ ಪೈಸಿಡೆಂಟರವರಿಂದ ವಿಧಾಯಕ ಮಾಡಲ್ಪಡುವ ಫಾರಂನಲ್ಲಿ ಕ್ರಮವಾಗಿ ಸಾಲು ಮಾಹೆ ತಾರೀಖು ನಿತಿ ಟೋಲು ಪಾವತಿ ಮಾಡತಕ್ಕ ಆಸಾಮಿಗಳಿಗೆ ರಶೀದಿ ಕೊಡಬೇಕು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲಿ ಮಂಜೂರು ಮಾಡುವ ಅಧಿಕಾರವು ಪೈಸಿಡೆಂಟರವರಲ್ಲಿರುತ್ತದೆ.

4. ಪ್ರತಿ ತಿಂಗಳು 10ನೆ ತಾರೀಖುವಳಗಾಗಿ ಹಿಂದಣ ಮಾಹೆಯ ಖಿಸ್ತು ಮೊಬಲಗನ್ನು ಪಾವತಿ ಮಾಡಬೇಕು. ಹರಾಜು ಆಖ್ಯೈರಾದ ಕೂಡ್ಲೆ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟರು ಎರಡು ಮಾಹೆಗಳ ಖಿಸ್ತಿಗೆ ಸಮವಾದ ಮೊಬಲಗನ್ನು ಡಿಪಾಜಿಟ್ ಬಗ್ಗೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖ್ಯೈರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಆಖ್ಯೈರಾದ ಕೂಡ್ಲೆ ಡಿಪಾಜಿಟ್ ಬಗ್ಗೆ ಮೊಬಲಗನ್ನು ಹಾಜರ್ಮಾಡದೆ ಇದ್ದರೆ, ಖರ್ಚಿಗು ಮತ್ತು ಲುಕ್ಸಾನಿಗೂ, ಅವ್ವಲ್ ಕಂಟ್ರಾಕ್ಟದಾರನನ್ನು ಗುರಿಪಡಿಸಿ ಪುನಹಾ ಹರಾಜು ಮಾಡಿಸುತ್ತೆ. ಖಿಸ್ತು ಮೊಬಲಗನ್ನು ವಾಯಿದೆ ವಳಗೆ ಹಾಜರ್ಮಾಡಲು ತಪ್ಪಿದರೆ, ಡಿಪಾಜಿಟ್ ಮೊಬಲಗನ್ನು ದಂಡವಾಗಿ ತೆಗದುಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಿ ಆದರಲ್ಲಿ ನಷ್ಟವೇನಾದರೂ ಆದಲ್ಲಿ ಆ ನಷ್ಟಕ್ಕೆ ಅವ್ವಲ್ ದರಖಾಸ್ತು ದಾರನನ್ನು ಗುರಿಪಡಿಸುತ್ತೆ. ಎರಡನೆ ಹರಾಜಿನಲ್ಲಿ ನಫೆ ಬಂದಲ್ಲಿ, ಮೊದಲು ದರಖಾಸ್ತು ದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.